# ‘ಬಹುಮುಖ ವ್ಯಕ್ತಿತ್ವದ ಪಾತ್ರದಲ್ಲಿ ಕಾಣಿಸಬೇಕು



ಯಶವಂತ್ ಬೆಟ್ಟಸ್ವಾಮಿ
ಸ್ಟಾರ್ ಸುವರ್ಣ ‘ಗೌರಿಶಂಕರ’ದ ಶಂಕರ

◆ **ಅಭಿನಯದ ರುಚಿ ನಿಮಗೆ ಹಿಡಿಸಿದ್ದು ಹೇಗೆ?**

ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ನಮ್ಮೂರು. ಮೊದಲಿನಿಂದಲೂ ಓದಿನ ಕಡೆ ಅಷ್ಟು ಆಸಕ್ತಿ ಇರಲಿಲ್ಲ. ದೃಶ್ಯ ಕಲಾ ಮಾಧ್ಯಮದತ್ತ ಒಲವು ಮಾತ್ರ ಇತ್ತು. ನನ್ನ ಜೊತೆಗೆ ಒಡನಾಡಿಗಳೂ ನನ್ನ ಅಭಿಲಾಷೆಯನ್ನೇ ಬೆಂಬಲಿಸಿದರು. ಆದರೆ ಅದನ್ನು ನಾನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಡಿಪ್ಲೊಮಾದಲ್ಲಿ ಕೆಲವು ವಿಷಯಗಳಲ್ಲಿ ಪಾಸಾಗಲಿಲ್ಲ. ಕಾಲೇಜು ಇಲ್ಲ ಎಂದು ಆಗ ಡಾನ್ಸ್, ನಟನೆಯ ತರಗತಿಗೆ ಸೇರಿದೆ. ಇದರ ಜೊತೆ ಜಿಮ್ನಾಸ್ಟಿಕ್ ಅಭ್ಯಾಸವೂ ಆರಂಭವಾಯಿತು. ನಟನೆಯನ್ನು ಮಾಡಬೇಕು ಎಂದಿದ್ದವನಿಗೆ ಮಾಡೆಲಿಂಗ್ ಕೈಬೀಸಿ ಕರೆಯಿತು. ಅದನ್ನು ನಾನು ಬಯಸಿರಲಿಲ್ಲ. ಅವಕಾಶಕ್ಕಾಗಿ ಪ್ರಯತ್ನವನ್ನೂ ಮಾಡಿರಲಿಲ್ಲ. ಸಿನಿಮಾ ಮಾಡಬೇಕು ಎಂದಿದ್ದವನಿಗೆ ಒಂದು ವೇದಿಕೆ ಸಿಗ್ತಾ ಇದೆ. ಸಾಕಷ್ಟು ಜನ ಮಾಡೆಲಿಂಗ್ ಜಗತ್ತಿನಿಂದಲೂ ಸಿನಿಮಾಕ್ಕೆ ಬಂದಿದ್ದಾರೆ. ನನಗೂ ಅಂತಹ ಒಂದು ಅವಕಾಶ ಬಂದಿದೆ ಎಂದು ಮಾಡೆಲಿಂಗ್ ಪ್ರವೇಶ ಮಾಡಿದೆ. ಅದರ ಜೊತೆ ಆಡಿಷನ್ ಕೊಡಲು ಶುರುಮಾಡಿದೆ. ಆರಂಭದಲ್ಲಿ ಚಿಕ್ಕಪುಟ್ಟ ಅವಕಾಶಗಳು ಸಿಕ್ಕವು. ಸಿಕ್ಕ ಅವಕಾಶವನ್ನು ಬಳಕೆ ಮಾಡಿಕೊಂಡೆ. ಕಲರ್ಸ್ ಕನ್ನಡದ ‘ಇವಳು ಸುಜಾತಾ’ದಲ್ಲಿ ನಾಯಕನಾಗಿ ಆಯ್ಕೆ ಆದೆ. ಅದೇ ನನ್ನ ಮೊದಲ ಧಾರಾವಾಹಿ

◆ **ಅಭಿನಯ ಜಗತ್ತಿನಲ್ಲಿ ನಿಮಗೆ ಭರವಸೆ ಸಿಕ್ಕಿದೆಯಾ?**

ಇಲ್ಲಿ ಯಾವತ್ತೂ ಭರವಸೆ ಸಿಗಲ್ಲ. ಅಭಿನಯಕ್ಕಿಂತ ಮುಂಚೆ ಬೇರೆ ಉದ್ಯೋಗವನ್ನೂ ಮಾಡಿದ್ದೆ. ಆ ಅನುಭವವೂ ಇತ್ತು. ಅದಕ್ಕೆ ಹೋಲಿಸಿ ನೋಡಿದರೆ, ಇಲ್ಲಿ ದಿನದ 24 ಗಂಟೆ ಕೆಲಸ ಮಾಡಿದರೂ ಬೇಸರ ಅನ್ನಿಸುವುದಿಲ್ಲ. ಆಯಾಸವೂ ಆಗುವುದಿಲ್ಲ. ಬಣ್ಣ ಹಚ್ಚಿದಾಗಿನಿಂದ ಖಾಲಿ ಅಂತೂ ಕುಳಿತಿಲ್ಲ. ‘ಸುಜಾತಾ’ ಮುಗಿಯುತ್ತಿದ್ದಂತೆ ‘ಹೂಮಳೆ’ಗೆ ಅವಕಾಶ ಸಿಕ್ಕಿತು. ಅದು ಮುಗಿಯುವ ಮುನ್ನವೇ ತೆಲುಗು ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಎರಡು ವರ್ಷ ಹೈದರಾಬಾದ್‌ನಲ್ಲಿ ಇದ್ದೆ. ಅದು ಮುಗಿಯುವ ಹಂತದಲ್ಲಿ ‘ಗೌರಿಶಂಕರ’ದಲ್ಲಿ ಸಿಕ್ಕಿದೆ. ಬಣ್ಣ ಸುಮ್ಮನೆ ಇರಲು ಬಿಟ್ಟಿಲ್ಲ.

◆ **ನಿಮ್ಮ ಪಾತ್ರಗಳ ಬಗ್ಗೆ ಯಾವ ಕಲ್ಪನೆ ಇಟ್ಟುಕೊಂಡಿದ್ದೀರಿ?**

ಬಹುಮುಖ ವ್ಯಕ್ತಿತ್ವವನ್ನು ಪ್ರತಿನಿಧಿಸುವ ಒಂದು ಪಾತ್ರವನ್ನು ನಿರ್ವಹಿಸಬೇಕು ಎನ್ನುವುದು ನನ್ನ ಬಹುದಿನಗಳ ಕನಸು. ಅದೃಷ್ಟವಶಾತ್ ಅಂತಹ ಒಂದು ಸಣ್ಣ ಅನುಭವ ‘ಹೂಮಳೆ’ಯಲ್ಲಿ ಆಗಿದೆ. ನಾನು ಅಗ್ರಿಮೆಂಟ್‌ಗೆ ಸಹಿ ಹಾಕಿದಾಗ 22 ವರ್ಷದವನಿದ್ದೆ. ಅದರಲ್ಲಿ ನಾನು 29 ವರ್ಷದ ರಾಜಕಾರಣಿಯ ಪಾತ್ರವನ್ನು ಮಾಡಿದ್ದೆ. ತುಂಬ ಚಾಲೆಂಜಿಂಗ್ ಇತ್ತು. ಅದು ನನಗೆ ಖುಷಿಕೊಟ್ಟಿತ್ತು. ತೆಲುಗಿನಲ್ಲಿ ನಾಯಕನ ಪಾತ್ರವಾಗಿದ್ದರೂ ಅದಕ್ಕೆ ಖಳನಾಯಕನ ಛಾಯೆ ಇತ್ತು. ಶಂಕರದಲ್ಲಿ ಪಾತ್ರ ಹೇಗೆ ಭಿನ್ನ ಎಂದರೆ, ಗಂಭೀರತೆ ಜೊತೆ ಹಾಸ್ಯವನ್ನೂ ಮಾಡುತ್ತಾನೆ. ಪ್ರದರ್ಶನ ಮಾಡುವ ವ್ಯಕ್ತಿತ್ವ, ಎದ್ದು ಕಾಣುವಂತಹ ವೇಷಭೂಷಣ ಹಾಕುತ್ತಾನೆ.

ಹೈದರಾಬಾದ್‌ನಲ್ಲಿ ಇದ್ದಾಗಲೇ ಬೇರೆ ಬೇರೆ ಪಾತ್ರ ಸಿಕ್ಕರೂ ಮಾಡದೆ, ಮತ್ತೊಂದು ಅವಕಾಶಕ್ಕೆ ಕಾದಿದ್ದರಿಂದ ಇದು ಸಿಕ್ಕಿದೆ. ಇದು ಹೇಗಿದೆ ಅಂದರೆ, ಶಂಕರನಿಗೆ ಇಂಗ್ಲಿಷ್ ಬರಲ್ಲ. ಆದರೆ ಇಂಗ್ಲಿಷ್ ಮಾತನಾಡುವ ಆಸೆ. ಫ್ಯಾಷನ್ ಸೂಕ್ಷ್ಮತೆ ಗೊತ್ತಿಲ್ಲ. ಆದರೆ ಫ್ಯಾಷನ್ ಮಾಡುವ ಬಯಕೆ. ಅವನ ವ್ಯಕ್ತಿತ್ವ ತುಂಬ ಇಷ್ಟ ಆಯಿತು. ಜನರ ಮಧ್ಯದಲ್ಲಿ ತಾನು ಆಕರ್ಷಣೀಯವಾಗಿ ಕಾಣಬೇಕು ಎನ್ನುವ ಹಪಾಹಪಿ ಅವನಿಗಿದೆ. ಕೊನೆಯ ಪಕ್ಷ ತಾನು ಧರಿಸುವ ಬಟ್ಟೆಯಿಂದಲಾದರೂ ಮಿಂಚಬೇಕು ಎಂದು ಬಯಸುತ್ತಾನೆ.

◆ **ನಿಮಗೆ ಕಥೆ ಬರೆಯುವ ಅವಕಾಶ ಸಿಕ್ಕರೆ ಎಂತಹ ಕಥೆ ಕಟ್ಟುತ್ತೀರಿ?**

ಬಹುಮುಖ ಗುಣದ ವ್ಯಕ್ತಿಯ ಕಥೆಯನ್ನು ಹೇಳಬೇಕು. ಕೊನೇ ಪಕ್ಷ ಅದಕ್ಕೆ ಮೂರು ಶೇಡ್ ಆದರೂ ಇರಬೇಕು. ಅಂತಹ ನಾಯಕನನ್ನು ಒಳಗೊಂಡ ಕಥೆ ಇವತ್ತಿನ ಕಾಲಕ್ಕೆ ಸಂಬಂಧಿಸಿದಂತೆ ಇರಬೇಕು. ಅಂತಹ ಒಂದು ಕಥೆಗೆ ಸಿನಿಮಾ ಮಾಡುತ್ತಿದ್ದೇನೆ. ಯೂಟೂಬ್‌ನಲ್ಲಿ ಕಂಟೆಂಟ್ ಕ್ರಿಯೇಟರ್ ಕಥೆ. ಅದರಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಇನ್‌ಫ್ಲುಯೆನ್ಸರ್ ಪಾತ್ರವನ್ನು ನಾನೇ ಮಾಡುತ್ತಿದ್ದೇನೆ. ಈಗಾಗಲೇ ಚಿತ್ರಕಥೆಯೂ ಸಿದ್ಧವಿದೆ. ಅದರ ಬಜೆಟ್ ಕ್ರೋಡೀಕರಣಕ್ಕೆ ಇನ್ನೂ ಒಬ್ಬ ನಿರ್ಮಾಪಕರು ಬೇಕಿದ್ದಾರೆ. ಅದು ಇವತ್ತಿನ ತಲೆಮಾರಿನ ಜನರ ಕಥೆಯನ್ನೇ ಇಟ್ಟುಕೊಂಡಿದ್ದೇವೆ.

■ ರಾಘವೇಂದ್ರ ಕೆ.